# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 1014/2015

| | | |
|---|---|---|
| ಸಾಕ್ಷಿಯ ಹೆಸರು | ಃ ಡಾಃ ಲಕ್ಷ್ಮೀಕಾಂತ್ | ಸಿ.ಡಬ್ಲ್ಯೂ ಃ 1 |
| ತಂದೆ ಹೆಸರು | ಃ ಶ್ರೀ ರಂಗಯ್ಯ | ಪಿ.ಡಬ್ಲ್ಯೂ ಃ 3 |
| ವಯಸ್ಸು | ಃ 56 ವರ್ಷ | ಪ್ರಮಾಣೀಕರಿಸಿದ ದಿಃ 29/03/2022 |
| ವೃತ್ತಿ | ಃ ಸರ್ಕಾರಿ ವೈದ್ಯಾಧಿಕಾರಿ, ಹೊಳೆನರಸೀಪುರ | |
| ವಾಸ | ಃ ಹೊಳೆನರಸೀಪುರ | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನಾನು 2007 ರಿಂದ ಈವರೆಗೂ ಹೊಳೆನರಸೀಪುರದ ಸರ್ಕಾರಿ ಆಸ್ಪತ್ರೆಯಲ್ಲಿ, ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕಃ 27.01.2015 ರಂದು ರಾತ್ರಿಪಾಳ್ಯದಲ್ಲಿ ಕರ್ತವ್ಯ ನಿರತರಾದ ಚಾಸಾ-2 ರಿಂದ ಚಾಸಾ-9 ರವರು ಕರ್ತವ್ಯದಲ್ಲಿ ಇದ್ದಾಗಾ ರಾತ್ರಿ 10.15 ನಿಮಿಷಕ್ಕೆ ಪುಟ್ಟರಾಜು ಬಿನ್ ಕರೀಗೌಡ ಎಂಬ ವ್ಯಕ್ತಿ ವಿಷ ಸೇವನೆ ಮಾಡಿದ್ದು ತುರ್ತು ಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ರೋಗಿಯ ಸಂಬಂಧಿ ಆರೋಪಿ ಮಂಜ ಇತನು ಚಾಸಾ-2 ರವರ ಕೆನ್ನೆಗೆ ಹೊಡೆದು ಮತ್ತು ಆ ದಿನ ಕರ್ತವ್ಯದಲ್ಲಿ ಇದ್ದ ಆಸ್ಪತ್ರೆಯ ಸಿಬ್ಬಂದಿಗಳ ಮೇಲೆ ಜಗಳ ಮಾಡಿರುತ್ತಾನೆ ಎಂದು ಚಾಸಾ-3 ರವರು ನನಗೆ ದೂರವಾಣಿಗೆ ಕರೆ ಮಾಡಿ ತಿಳಿಸಿರುತ್ತಾರೆ. ಆನಂತರ ನನಗೆ ಸದರಿ ಘಟನೆಯ ಬಗ್ಗೆ ಲಿಖಿತವಾಗಿ ವರದಿ ನೀಡಿರುತ್ತಾರೆ. ಮಾರನೇ ದಿನ ಅಂದರೆ ದಿನಾಂಕಃ 28.01.2015 ರಲ್ಲಿ ಆಸ್ಪತ್ರೆಯಲ್ಲಿ ಸದರಿ ಘಟನೆಯ ಬಗ್ಗೆ ವಿಚಾರಣೆ ಮಾಡಿ ಪಿ.ಎಸ್.ಐ., ನಗರ ಪೋಲೀಸ್ ಠಾಣೆ ಹೊಳೆನರಸೀಪುರ ಇವರಿಗೆ ಲಿಖಿತ ದೂರನ್ನು ಟಪಾಲಿನ ಮುಖಾಂತರ ನಮ್ಮ ಸಿಬ್ಬಂದಿವರ್ಗದವರ ಮುಖಾಂತರ ನೀಡಿರುತ್ತೇನೆ. ಸಾಕ್ಷಿ ದೂರನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ದೂರನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಪ್ರಸ್ತುತ ಪ್ರಕರಣದ ತನಿಖೆಯ ಸಂದರ್ಭದಲ್ಲಿ ದಿನಾಂಕಃ 31.03.2015 ರಂದು ಚಾಸಾ-2, ಚಾಸಾ-5, ಚಾಸಾ-6, ಚಾಸಾ-8, ಚಾಸಾ-4, ಚಾಸಾ-9 ರವರು ದಿನಾಂಕಃ 27.01.2015 ರಂದು ರಾತ್ರಿ 08.00 ಗಂಟೆಯಿಂದ ದಿನಾಂಕಃ 28.01.2015 ರ ಬೆಳಿಗ್ಗೆ 08.00 ಗಂಟೆಯವರೆಗೆ ಆಸ್ಪತ್ರೆಯಲ್ಲಿ ಕರ್ತವ್ಯ ನಿರತರಾದ ಬಗ್ಗೆ ಕರ್ತವ್ಯ ದೃಡೀಕರಣ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸಾಕ್ಷಿ ಸದರಿ ಕರ್ತವ್ಯ ದೃಡೀಕರಣ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದರಿಂದ ಸದರಿ ಪ್ರಮಾಣಪತ್ರವನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ.ಎನ್.ವಿ. ವಕೀಲರಿಂದಃ

ನಾನು ದಿನಾಂಕಃ 27.01.2015 ರಂದು ನಾನು ಕರ್ತವ್ಯದಲ್ಲಿ ಇದ್ದೇನು. ಆಸ್ಪತ್ರೆಯಲ್ಲಿ ಕರ್ತವ್ಯ ನಿರತ ಸಿಬ್ಬಂದಿಯ ಹಾಜರಿ ರಿಜಿಸ್ಟರ್ ಅನ್ನು ನಿರ್ವಹಣೆ ಮಾಡುತ್ತೇವೆ ಎಂದರೆ ಸರಿ. ಸದರಿ ಹಾಜರಾತಿ ಪುಸ್ತಕವನ್ನು

ಪೋಲೀಸ್ ಅಧಿಕಾರಿಗಳಿಗೆ ನೀಡಿರುವುದಿಲ್ಲ. ನನಗೆ ಕಾನೂನಿನ ಅರಿವು ಇರುತ್ತದೆ. ನಾನು ದಿನಾಂಕಃ 27.01.2015 ಕ್ಕೆ ಖುದ್ದಾಗಿ ಪೋಲೀಸ್ ಠಾಣೆಗೆ ಹಾಜರಾಗಿ ದೂರು ನೀಡಲು ಯಾವುದೇ ತೊಂದರೆ ಇರಲಿಲ್ಲ. ಚಾಸಾ-3 ರವರಿಂದ ಪಡೆದ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ-3 ಅನ್ನು ನಾನು ಬೆರಳಚ್ಚು ಮಾಡಿಸಿರುತ್ತೇನೆ. ನಿಪಿ-3 ಅನ್ನು ನಮ್ಮ ಆಸ್ಪತ್ರೆಯ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಪ್ರಿಂಟ್ ಪಡೆದಿರುತ್ತೇನೆ. ಚಾಸಾ-3 ರವರಿಂದ ದೂರು ದಾಖಲು ಮಾಡಿಸಲು ಯಾವುದೇ ತೊಂದರೆ ಇರಲಿಲ್ಲ. ಆರೋಪಿ ನನಗೆ ವೈಯಕ್ತಿಕವಾಗಿ ಪರಿಚಯ ಇರುವುದಿಲ್ಲ. ಆರೋಪಿಯನ್ನು ನಾನು ನೋಡಿರುವುದಿಲ್ಲ. ಆರೋಪಿಯ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ಚಾಸಾ-3 ಆರೋಪಿಯ ವಿವರವನ್ನು ನನಗೆ ಹೇಳಿರುವುದಿಲ್ಲ.

ಚಾಸಾ-2 ರವರು ಯಾವ ಊರಿನ ನಿವಾಸಿ ಎಂದು ನನಗೆ ನೆನಪಿರುವುದಿಲ್ಲ. ಘಟನೆ ನಡೆದ ಸಂದರ್ಭದಲ್ಲಿ ಚಾಸಾ-2 ರವರಿಗೆ 58-59 ವಯಸ್ಸು ಇರಬಹುದು. ಚಾಸಾ-2 ಹಲ್ಲೆಯಲ್ಲಿ ಆದ ಗಾಯಗಳಿಗೆ ನಮ್ಮ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ. ಘಟನ ಸ್ಥಳದ ಚೆಕ್ ಬಂಧಿ ನನಗೆ ಹೇಳಲು ಆಗುವುದಿಲ್ಲ. ಘಟನ ಸ್ಥಳದ ಚೆಕ್ ಬಂಧಿ ಮಾಹಿತಿಯನ್ನು ನಾನು ಪೋಲೀಸರಿಗೆ ನೀಡಿರುವುದಿಲ್ಲ. ಚಾಸಾ-2 ರಿಂದ 9 ರವರ ಮಾತು ಕೇಳಿ ಸುಳ್ಳು ದೂರು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-2 ರಿಂದ 3 ರವರಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿ ಚಾಸಾ-2 ರಿಂದ 9 ರವರಗೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಘಟನ ಸ್ಥಳ ಆಸ್ಪತ್ರೆಯ ತರ್ತು ಚಿಕಿತ್ಸಾ ಘಟಕ ಆಗಿದ್ದರಿಂದ ಅಲ್ಲಿ ಹಲವಾರು ಜನ ಸೇರಿರುತ್ತಾರೆ ಎಂದರೆ ಸರಿ. ನಿಪಿ-3 ಯಾವ ವ್ಯಕ್ತಿಯಿಂದ ಬೆರಳಚ್ಚು ಮಾಡಿಸಿರುತ್ತೇನೆ ಎಂದು ಉಲ್ಲೇಖ ಮಾಡಿರುವುದಿಲ್ಲ. ನಿಪಿ-3 ರಲ್ಲಿ ಆರೋಪಿ ಚಾಸಾ-2 ರಿಂದ 9 ರವರ ಕರ್ತವ್ಯ ನಿರ್ವಹಣೆಗೆ ಅಡ್ಡಿ ಆಂತಂಕ ಉಂಟು ಮಾಡಿದ್ದಾರೆ ಎಂದು ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-3 ರವರು ದಿನಾಂಕಃ 27.01.2015 ರಂದು ರಾತ್ರಿ 10.35 ಕ್ಕೆ ದೂರವಾಣಿ ಮುಖಾಂತರ ಘಟನೆಯ ವಿವರವನ್ನು ತಿಳಿಸಿದ ವಿಚಾರವನ್ನು ನಿಪಿ-3 ರಲ್ಲಿ ಉಲ್ಲೇಖ ಮಾಡಿರುವುದಿಲ್ಲ. ನಮ್ಮ ಆಸ್ಪತ್ರೆಯ ಆವರಣದಲ್ಲಿ ಸಿಸಿ ಕ್ಯಾಮಾರಗಳು ಅಳವಡಿಸಲಾಗಿಲ್ಲ. ಈ ಮುಂಚೆ ಆರೋಪಿಯನ್ನು ನಾನು ನೋಡಿರುವುದಿಲ್ಲ. ಆರೋಪಿ ಚಾಸಾ-2 ರಿಂದ 9 ರವರನ್ನು ಕರ್ತವ್ಯ ನಿರ್ವಹಣೆ ಮಾಡಲು ಯಾವುದೇ ಅಡ್ಡಿ ಆತಂಕ ಮಾಡಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 27.01.2015 ರಂದು ಮಂಜ ಎಂಬ ವ್ಯಕ್ತಿ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ದಿನಾಂಕಃ 27.01.2015 ರಂದು ಆರೋಪಿ ಮದ್ಯಪಾನ ಸೇವನೆ ಮಾಡಿರುವ ಬಗ್ಗೆ ನಾವು ಯಾವುದೇ ವೈದ್ಯಕೀಯ ಪರೀಕ್ಷೆ ಮಾಡಿರುವುದಿಲ್ಲ.

<u>ಮರು ವಿಚಾರಣೆ ಇಲ್ಲಃ</u>

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ